ಶ್ರೀ ಟಿ. ಎನ್. ನರಸಿಂಹಮೂರ್ತಿ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

(ಅ) ಬಂದಿದೆ

(ಆ) ಗೊತ್ತಾಗಿದೆ.

(ಇ) ಸಿದ್ಧಪಡಿಸಲಾಗುವುದು

(ಈ) ಅಂದಾಜನ್ನು ಸುಮಾರು ಆರು ತಿಂಗಳ ಅವಧಿಯಲ್ಲಿ ಸಿದ್ಧಪಡಿಸಲಾಗುವುದು ಹಾಗೂ ಸರ್ಕಾರದ ಆಡಳಿತಾತ್ಮಕ ಅನುಮೋದನೆ ನಂತರ ಕೈಗೆತ್ತಿಕೊಳ್ಳಲಾಗುವುದು.

ಶ್ರೀ ಎಂ. ಸಿದ್ದಮಾದಯ್ಯ.— ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಕೊಟ್ಟಿರುವ ಉತ್ತರದಲ್ಲಿ ಪಟ್ಟಿಯನ್ನು ಸಿದ್ಧಪಡಿಸಲಾಗಿದೆಯೆಂದು ಮತ್ತು ೪ ತಿಂಗಳಿನಲ್ಲಿ ಕಾರ್ಯಗತ ಮಾಡುತ್ತೇವೆಂದು ಹೇಳಿದ್ದಾರೆ. ಇದರ ಬಗ್ಗೆ ಅಧಿಕಾರಿಗಳು ಡಿಲೇ ಮಾಡಿದರೆ ಏನು ಮಾಡುವುದು ? ಇದು ತುರ್ತಾಗಿ ಆಗಬೇಕಾಗಿದೆ. ನೀರು ಇಲ್ಲದೆ ಒಹಳ ತೊಂದರೆಯಾಗಿದೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ —ಕೊಳ್ಳೆಗಾಲ ಟೌನ್ ಏನಿವೆ, ಅಲ್ಲಿ ಜನಸಂಖ್ಯೆ ವೇಗವಾಗಿ ಬೆಳೆಯುತ್ತಿದೆಯೆಂದು ಸರ್ಕಾರದ ಗಮನಕ್ಕೆ ಬಂದಿದೆ. ಅಲ್ಲಿಗೆ ನೀರಿನ ವ್ಯವಸ್ಥೆ ಸಾಕಾಗುವುದಿಲ್ಲವೆಂದೂ ಸಹಾ ಗೊತ್ತಾಗಿದೆ. ಕರ್ನಾಟಕ ನೀರು ಸರಬರಾಜು ಮಂಡಳಿಯವರಿಗೆ ಇದರ ಬಗ್ಗೆ ಆದೇಶ ಕೊಡಲಾಗಿದೆ. ಆದಷ್ಟು ಬೇಗ ಅದರ ಎಸ್ಟಿಮೇಟನ್ನು ತಯಾರಿಸಿ ಸರ್ಕಾರಕ್ಕೆ ಕಳುಹಿಸಬೇಕೆಂದು ಮತ್ತೊಮ್ಮೆ ಒತ್ತಾಯ ಮಾಡಿ ಅದನ್ನು ತರಿಸಿಕೊಳ್ಳುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ. ಸಿದ್ದವನಾದಯ್ಯ.—ಅಲ್ಲಿ ಹಾಕಿರುವ ಪೈಪುಗಳು ಹಳೆಯವು ಆಗಿರುವುದರಿಂದ, ಕೆಲವು ಕಡೆ ಒಡೆದು ಹೋಗಿ ನೀರು ಸರಿಯಾಗಿ ಸಪ್ಲೈ ಆಗುತ್ತಿಲ್ಲ. ಈಗ್ಗೆ ೩ ದಿನಗಳಿಂದ ನೀರೇ ಬರುತ್ತಿಲ್ಲ. ಆದ್ದರಿಂದ ಹಳೆಯ ಪೈಪ್‌ಗಳನ್ನು ಬದಲಾಯಿಸುತ್ತೀರಾ ?

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಹಳೇ ಪೈಪುಗಳನ್ನು ರೀಪ್ಲೇಸ್ ಮಾಡಬೇಕೆಂದು ಈಗಾಗಲೇ ಕ್ರಮ ಕೈಗೊಂಡಿದ್ದೇವೆ. ಅದನ್ನು ಮಾಡಿಯೇ ಮಾಡುತ್ತೇವೆ.

ಅಧ್ಯಕ್ಷರು.—ಬಂದರು, ಮೀನುಗಾರಿಕೆ, ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಮೇಲ್ಮನೆಗೆ ಹೋಗಬೇಕಾಗಿರುವುದರಿಂದ ಮೊದಲು ಅವರಿಗೆ ಸಂಬಂಧಪಟ್ಟ ಪ್ರಶ್ನೆಗಳನ್ನು ಮೊದಲಂ ತೆಗೆದು ಕೊಳ್ಳುತ್ತೇನೆ.

ನಿಪ್ಪಾಣಿ ನಗರಸಭೆಗೆ ಅಭಿವೃದ್ಧಿ ಅನುದಾನ

೬೯೯. ಶ್ರೀ ಸುಭಾಶ್ ಜೋಶಿ (ನಿಪ್ಪಾಣಿ),—ಮಾನ್ಯ ಬಂದರು, ಮೀನುಗಾರಿಕೆ, ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

(ಅ) ನಿಪ್ಪಾಣಿ ನಗರಸಭೆಗೆ ಅಭಿವೃದ್ಧಿ ಅನುದಾನವನ್ನು ನೀಡಲಾಗಿದೆಯೇ ?

(ಆ) ಇಲ್ಲವಾದಲ್ಲಿ ಇದನ್ನು ಯಾವಾಗ ನೀಡಲಾಗುವುದು ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಬಂದರು, ಮೀನುಗಾರಿಕೆ, ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

(ಅ) ಇಲ್ಲ.

(ಆ) ಸೂಕ್ತ ಸಮಯದಲ್ಲಿ ಪರಿಶೀಲಿಸಲಾಗುವುದು.

SRI SUBHASH JOSHI.—The answer given to me is, "This will be examined at the appropriate time." When will be the appropriate time ? because all development works are held up in Nippani and it is facing lot of problem. Why the government is giving step-motherly treatment to Nippani CMC ?

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಅಧ್ಯಕ್ಷರೇ, ಎಲ್ಲಾ ಪುರಸಭೆಗಳೂ ಮಾತೃ ಸಂಸ್ಥೆಗಳೆಂದು ತಿಳಿದು ಸಹಾಯಧನವನ್ನು ಕೊಡುತ್ತಿದ್ದೇವೆ. ಮಾನ್ಯ ಸದಸ್ಯರು ಇದಕ್ಕೆ ಮಲತಾಯಿ ಧೋರಣೆ ಎನ್ನುವುದು ನನಗೆ ಅರ್ಥವಾಗುವುದಿಲ್ಲ. ಅಪ್ರೋಪ್ರಿಯೇಟ್ ಟೈಮ್‌ನಲ್ಲಿ ಎಲ್ಲಾ ಪುರಸಭೆಗಳಿಗೂ ಹಣವನ್ನು ಬಿಡುಗಡೆ ಮಾಡುತ್ತೇವೆ. ಈ ಬಡ್ಜೆಟ್ ಅಧಿವೇಶನ ಮುಗಿದ ತಕ್ಷಣವೇ ಯಾವ ಯಾವ ಪುರಸಭೆಗಳಿಗೆ ಅದ್ಯತೆ ಮೇರೆಗೆ ಹಣ ಕೊಡಬೇಕೆನ್ನುವ ಬಗ್ಗೆ ಶೀಘ್ರವಾಗಿ ಕ್ರಮ ಕೈಗೊಳ್ಳುತ್ತೇವೆ.

ಚುಕ್ಕೆ ಗುರುತಿನ ಪ್ರಶ್ನೆ

ಶಹಬಾದ್ ಪಟ್ಟಣಕ್ಕೆ ನೀರಿನ ಸಮಸ್ಯೆ

೧೨೦೪. ಶ್ರೀ ಬಿ. ಎಸ್. ಚವ್ಹಾಣ್ (ಶಹಬಾದ್).—ಮಾನ್ಯ ಬಂದರು, ಮೀನುಗಾರಿಕೆ, ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

(ಅ) ಗುಲ್ಬರ್ಗಾ ಜಿಲ್ಲೆಯ ಶಹಬಾದ್ ಟೌನ್‌ನಲ್ಲಿ ಕುಡಿಯುವ ನೀರಿನ ಟ್ಯಾಂಕನ್ನು ಎಂದಿನಿಂದ ನಿರ್ಮಿಸಲಾಗುತ್ತಿದೆ ?

(ಆ) ಈ ನಿರ್ಮಾಣಕ್ಕಾಗಿ ಒಟ್ಟು ಎಷ್ಟು ಹಣ ವೆಚ್ಚ ಮಾಡಲಾಗುವುದು ?

(ಇ) ಈ ನಿರ್ಮಾಣಕ್ಕಾಗಿ ಇಲ್ಲಿಯವರೆಗೆ ಎಷ್ಟು ಹಣ ವೆಚ್ಚ ಮಾಡಲಾಗಿದೆ ?

(ಈ) ಸದರಿ ನೀರಿನ ಟ್ಯಾಂಕಿನ ನಿರ್ಮಾಣ ವಿಳಂಬವಾಗಲಿಕ್ಕೆ ಕಾರಣಗಳೇನು ?

(ಉ) ಈಗ ನಿರ್ಮಾಣವಾಗುತ್ತಿರುವ ನೀರಿನ ಟ್ಯಾಂಕ್ ಕಾರ್ಯ ಯಾವ ಹಂತದಲ್ಲಿದೆ ?

(ಊ) ಇದನ್ನು ಯಾವಾಗ ಪೂರ್ಣಗೊಳಿಸಲಾಗುವುದು ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಬಂದರು, ಮೀನುಗಾರಿಕೆ, ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

(ಅ) ಕುಡಿಯುವ ನೀರಿನ ಟ್ಯಾಂಕನ್ನು ಕಟ್ಟುವ ಕೆಲಸವನ್ನು ೮/೮೫ರಲ್ಲಿ ಪ್ರಾರಂಭಿಸಲಾಯಿತು.

(ಆ) ಈ ನೀರಿನ ಟ್ಯಾಂಕಿನ ನಿರ್ಮಾಣ ಕಾರ್ಯ ಮಾಡಿಮುಗಿಸಲು ಒಟ್ಟು ೧೬.೩೨ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗುವುದು.

(ಇ) ಇಲ್ಲಿಯವರೆಗೆ ಈ ಕೆಲಸಕ್ಕೆ ೧೩.೧೨ ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಲಾಗಿದೆ.

(ಈ) ಬೀರಲಿಂಗೇಶ್ವರ ದೇವಸ್ಥಾನದ ಪದಾಧಿಕಾರಿಗಳು ತೆಗೆದ ಆಕ್ಷೇಪಣಾರಿ ಭೂ ವಿವಾದದಿಂದಾಗಿ ದಿನಾಂಕ ೨೪-೮-೮೪ ರಿಂದ ೧೬-೮-೮೫ರವರೆಗೆ ಕೆಲಸವನ್ನು ಪ್ರಾರಂಭಿಸಲಾಗಲಿಲ್ಲ. ನಂತರ ೮/೮೫ರಲ್ಲಿ ಕೆಲಸವನ್ನು ಆರಂಭಿಸಲಾಯಿತು. ಆದರೆ, ಗುತ್ತಿಗೆದಾರರ ಆನಾರೋಗ್ಯದ ನಿಮಿತ್ತ ಕೆಲಸವನ್ನು ನಿಲ್ಲಿಸಲಾಯಿತು, ಇದಲ್ಲದೆ ಈ ಕೆಲಸದ ಗುತ್ತಿಗೆದಾರರು ೧೪-೪-೮೯ರಂದು ನಿಧನ ಹೊಂದಿದರು. ಬಾಕಿ ಉಳಿದ ಕೆಲಸಗಳನ್ನು ಮಾಡಲು ದಿವಂಗತ ಗುತ್ತಿಗೆದಾರರ ಅಧಿಕಾರ ಪತ್ರವನ್ನು ಹೊಂದಿದ್ದವರಿಗೆ ವಹಿಸಿ ಕೊಡಲಾಯಿತು.

(ಉ) ಮೊದಲನೇ ಆಂಕಣಕ್ಕೆ ಮೇಲ್ಛಾವಣಿ ಹಾಕಲಾಗಿದ್ದು ಇನ್ನೊಂದು ಆಂಕಣದ ಸೆಂಟ್ರಿಂಗ್ ಕೆಲಸವು ಮುಗಿದಿದ್ದು ಕಂಬಿ ಕಟ್ಟುವ ಕೆಲಸವನ್ನು ತೆಗೆದುಕೊಳ್ಳಲಾಗುತ್ತಿದೆ.

(ಊ) ಈ ಟ್ಯಾಂಕಿನ ಕೆಲಸವನ್ನು ನವೆಂಬರ್ ೧೯೯೦ರ ವೇಳೆಗೆ ಮುಗಿಸಲು ಉದ್ದೇಶಿಸಲಾಗಿದೆ.

ಶ್ರೀ ಬಿ. ಎಸ್. ಚವ್ಹಾಣ್.—ಸನ್ಮಾನ್ಯ ಅಧ್ಯಕ್ಷರೇ, ಶಹಬಾದ್ ಪಟ್ಟಣವು ಗುಲ್ಬರ್ಗಾ ಜಿಲ್ಲೆಯಲ್ಲಿ ಪಾಪ್ಯುಲೇಷನ್ ಸಂಖ್ಯೆಯಲ್ಲಿ ೨ನೇ ಭಾಗದಲ್ಲಿದೆ. ಈ ಪಟ್ಟಣದಲ್ಲಿ ಕನಿಷ್ಟ ಒಂದು ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಇದೆ. ಅಲ್ಲಿರುವ ನೀರಿನ ಸಮಸ್ಯೆ ಮಿತಿಮೀರಿದ್ದಾಗಿದೆ. ಮಾನ್ಯ ಮಂತ್ರಿಗಳ ಉತ್ತರದ ಪ್ರಕಾರ ೧೯೮೫ರಲ್ಲಿ ಪ್ರಾರಂಭವಾದ ಈ ಕೆಲಸ ಇನ್ನೂ ಮಂದಗತಿಯಲ್ಲಿ ಸಾಗುತ್ತಿದೆ. ಏಕೆ ಅತಿ ವೇಗವಾಗಿ ಕೆಲಸವನ್ನು ಮಾಡಲಿಲ್ಲವೆಂದು ಮಾನ್ಯ ಮಂತ್ರಿಗಳಲ್ಲಿ ಕೇಳುತ್ತಿದ್ದೇನೆ.